ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದಃ-

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಪ್ರಸ್ತುತ ದಾವೆಯನ್ನು ವಾದಿರವರು ಯಾವ ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದಿರವರು ದಾವೆಯನ್ನು ಸರ್ವೇ ನಂಬರ್ 107/1ರ ಜಮೀನಿಗೆ ಸಂಬಂಧಿಸಿದಂತೆ ಮಾಡಿರುತ್ತಾರೆ. ನನ್ನ ಪ್ರತಿವಾದ ಪತ್ರವನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ದಾವಾ ಆಸ್ತಿಗಳನ್ನು ನಾನು ಖರೀದಿಸಿರುತ್ತೇನೆ. ನಾನು ಸರ್ವೇ ನಂಬರ್ 107/1ರ 1 ಎಕರೆ 5 ಗುಂಟೆ ಸ್ವತ್ತನ್ನು ಖರೀದಿಸಿರುತ್ತೇನೆ. ನಾನು ದಾವಾ ಆಸ್ತಿಯನ್ನು ಮುಸ್ಲಿಂರವರಿಂದ ಖರೀದಿಸಿರುತ್ತೇನೆ, ಅವರ ಹೆಸರು ನನಗೆ ಈಗ ನೆನಪಿರುವುದಿಲ್ಲ. ಸರ್ವೇ ನಂಬರ್ 107/1ರ 1 ಎಕರೆ 5 ಗುಂಟೆ ಸ್ವತ್ತನ್ನು 5 ಜನ ಸೇರಿ ಬರೆದುಕೊಟ್ಟಿರುತ್ತಾರೆ. ನಾನು ಹಾಜರುಪಡಿಸಿರುವ ನಿಡಿ-1ರ ಕ್ರಯ ಪತ್ರದಲ್ಲಿ ಹೇಳಿರುವ ಸಾಮಾನ್ಯ ಅಧಿಕಾರ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಸಾಮಾನ್ಯ ಅಧಿಕಾರ ಪತ್ರವು ನನ್ನ ಮನೆಯಲ್ಲಿ ಇರಬಹುದು. ಮೇಲೆ ಹೇಳಿದ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಮಾರಾಟಗಾರಿಂದ ಪಹಣಿ ಮತ್ತು ಮ್ಯೂಟೇಷನ್ ಅನ್ನು ಪಡೆದುಕೊಂಡಿರುತ್ತೇನೆ. ನಾನು ಪಡೆದುಕೊಂಡ ಪಹಣಿ ಮತ್ತು ಮ್ಯೂಟೇಷನ್ ಅನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳು ಈಗ ನನ್ನ ಬಳಿ ಇರುತ್ತದೇ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುತ್ತದೆಯೇ ಎಂದರೆ ಸಾಕ್ಷಿಯು ಆ ದಾಖಲೆಗಳು ಸಿಕ್ಕರೆ ಅದನ್ನು ಹಾಜರುಪಡಿಸುತ್ತೇನೆ ಇಲ್ಲವಾದರೆ ಹಾಜರುಪಡಿಸಲು ಸಾಧ್ಯವಿರುವುದಿಲ್ಲ ಎಂದು ನುಡಿಯುತ್ತಾರೆ. 1960 ರಿಂದ ನನಗೆ ಕ್ರಯ ಪತ್ರವಾದ ದಿನದ ಬಗ್ಗೆ ಇಸಿ ಅನ್ನು ತಂದು ಹಾಜರುಪಡಿಸಲು ನನಗೆ ಆಗುವುದಿಲ್ಲ. 1960 ರಿಂದ ಇಲ್ಲಿಯವರೆಗಿನ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಸಿಕ್ಕಿದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಆಫ್ಕ ಅಹಮದ್ ಎಂದರೆ ನನಗೆ ಕ್ರಯ ಪತ್ರ ಬರೆದುಕೊಟ್ಟವರು. ಸಾಕ್ಷಿ ನಿಮಗೆ ಕ್ರಯ ಪತ್ರ ಬರೆದುಕೊಟ್ಟವರ ವಿಳಾಸದ ಬಗ್ಗೆ ಯಾವುದಾದರೂ ದಾಖಲೆಗಳನ್ನು ನೋಡಿರುತ್ತೀನಾ ಎಂದರೆ ಸಾಕ್ಷಿಯು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ ಆದರೆ ಅವರು ಬೆಂಗಳೂರಿನವರು ಎಂದು ತಿಳಿದಿರುತ್ತದೆ. ನನಗೆ ಮಾರಾಟಮಾಡಿದರವರ ಹೆಸರಿಗೆ ಜಮೀನು ಇದ್ದ ಬಗ್ಗೆ ಪಹಣಿ ಮತ್ತು ಮ್ಯೂಟೇಷನ್ ನೋಡಿರುತ್ತೇನೆ.

ನಾನು ಖರೀದಿಸಿದ ಜಮೀನನ್ನು ನನಗೆ ಮಾರಾಟಗಾರರೇ ಬಂದು ತೋರಿಸಿ ಮಾತುಕತೆ ಮಾಡಿರುತ್ತಾರೆ. ನನ್ನ ಹೆಸರಿಗೆ ಆದ ಕ್ರಯ ಪತ್ರಕ್ಕೆ ಯಾರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಈ ದಿನ ಸಾಕ್ಷಿ ನುಡಿಯಲು ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಂಡು

ಬಂದಿರುತ್ತೇನೆ.

ನಿಡಿ-1 ರ ಸಾಕ್ಷಿ ಸಹಿ 1 ಮಾಡಿರುವ ಅರೇಹಳ್ಳಿ ಕೃಷ್ಣಮೂರ್ತಿ ಎನ್ನುವವರು ನನ್ನ ಸ್ನೇಹಿತರು. ಈಗ ಅವರು ನನಗೆ ತಿಳಿದಿರುವುದಿಲ್ಲ. ಮೃತ ಮರಿದೇವರು ರವರು ನನಗೆ ಬಹಳ ಚೆನ್ನಾಗಿ ಪರಿಚಯ ಇರುತ್ತದೆ. ಸದರಿ ಮರಿದೇವರುವರವರೇ ನಾನು ಖರೀದಿಸಿದ ಜಮೀನನ್ನು ನನಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಬಳಿ ಇರುವ ಸಾಮಾನ್ಯ ಅಧಿಕಾರ ಪತ್ರವನ್ನು ಸಹ ಸದರಿ ಮರಿದೇವರು ರವರೇ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ಅದನ್ನು ಯಾರು ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಮಾನ್ಯ ಅಧಿಕಾರವನ್ನು ಮುಂದಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.